ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 03.11.2023.**

**ಪಾಟೀ ಸವಾಲು - 7 ನೇ ಪ್ರತಿವಾದಿ ಪರ ವಕೀಲರಿಂದಃ**

9) ದಾವೆ ಹಾಕಲು ಮಾಹಿತಿಯನ್ನು ನಾನು ಮತ್ತು ನನ್ನ ಗಂಡ ಇಬ್ಬರೂ ಕೊಟ್ಟಿದ್ದೇವೆ. ಈ ದಾವೆಯಲ್ಲಿ ಒಟ್ಟು 9 ಐಟಂಗಳನ್ನು ಸೇರಿಸಿದ್ದೇನೆ. ನನಗೆ ಎಲ್ಲಾ 9 ಐಟಂಗಳ ವಿಸ್ತೀರ್ಣ ಗೊತ್ತಿರುತ್ತದೆ. ನಾನು ಹೇಳುತ್ತೇನೆ ನನಗೆ ದಾವಾ 9 ಐಟಂಗಳ ಅಳತೆ ಗೊತ್ತಿಲ್ಲ, ಸರ್ವೆ ನಂಬರುಗಳು ಮಾತ್ರ ಗೊತ್ತಿವೆ. ಅವುಗಳ ಸರ್ವೆ ನಂಬರ್ ಗಳು 104/1, 104/2, 247, 248, 228, 130, 131, 132 ಮತ್ತು 134 ಇರುತ್ತವೆ. ಐಟಂ ನಂ.1 ರಿಂದ 9 ರ ಪಹಣಿಗಳು ಯಾರ ಯಾರ ಹೆಸರಿನಲ್ಲಿ ಇರುತ್ತವೆ ಎಂದು ನಾನು ತಿಳಿದುಕೊಂಡಿಲ್ಲ. ನನಗೆ ಐಟಂ ನಂ.1 ರಿಂದ 9 ರ ಚೆಕ್ಕುಬಂದಿಗಳನ್ನು ಹೇಳಲು ಆಗುವುದಿಲ್ಲ. ಈ 9 ಸರ್ವೆ ನಂಬರ್ ಗಳ ಪಹಣಿಗಳು ಯಾರ ಯಾರ ಹೆಸರಿನಲ್ಲಿ ಇರುತ್ತವೆಯೋ ಅವರವರೇ ಆ ಸರ್ವೆ ನಂಬರ್ ಗಳನ್ನು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ ಎರಡು ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ನಿಪಿ-2 ಪಹಣಿಯಲ್ಲಿ ಸರ್ವೆ ನಂ.104/1 ರ 1 ಎಕರೆ 17 ಗುಂಟೆಯನ್ನು ಕಾಂತಮ್ಮನವರಿಗೆ ಮಾರಾಟ ಮಾಡಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಎಂ.ಆರ್.ನಂ.2/1993-94 ರಂತೆ ಕಾಂತಮ್ಮನಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ಅದೇ ಸರ್ವೆ ನಂಬರ್ ನಲ್ಲಿ 20 ಗುಂಟೆಯನ್ನು ನನ್ನ ತಾಯಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ದಾನವಾಗಿ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ 20 ಗುಂಟೆಯಲ್ಲಿ ಈಗ ಆಸ್ಪತ್ರೆ ಕಟ್ಟಿದ್ದಾರೆ ಎಂದರೆ ಸರಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೇ ಸದರಿ ಆಸ್ಪತ್ರೆಯ ಸ್ವಾಧೀನದಲ್ಲಿದೆ ಎಂದರೆ ಸರಿ. ಸದರಿ 20 ಗುಂಟೆ ದಾನವಾಗಿ ಪಡೆದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ದಾವೆಗೆ ಪಕ್ಷಕಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. 1 ಎಕರೆ 17 ಗುಂಟೆ ಖರೀದಿ ಮಾಡಿದ ಕಾಂತಮ್ಮನನ್ನು ಕೂಡ ದಾವೆಗೆ ಪಕ್ಷಕಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ

ಎಂದರೆ ಸರಿ. ಉಳಿದ ಆಸ್ತಿಗಳು ಈ ದಾವೆಯ ಪ್ರತಿವಾದಿಗಳಾದ 2, 5, 7 ಮತ್ತು ಮೃತ ರಾಧಮ್ಮನ ಹೆಸರುಗಳಿಗೆ ಪಹಣಿಗಳು ನಮೂದಾಗುತ್ತಿವೆ ಎಂದರೆ ಸರಿ. ಅವರೆಲ್ಲರೂ ತಮ್ಮ ತಮ್ಮ ಹೆಸರುಗಳಲ್ಲಿರುವ ಜಮೀನುಗಳ ವ್ಯವಸಾಯವನ್ನು ಮಾಡುತ್ತಿದ್ದಾರೆ ಎಂದರೆ ಸರಿ. ದಿನಾಂಕಃ 26.11.1989 ರಂದು ನನ್ನ ತಾಯಿ ಮತ್ತು ಆಕೆಯ ಮಕ್ಕಳ ನಡುವೆ ವಿಭಾಗ ಪತ್ರವಾಗಿದೆ ಎಂದರೆ ಸರಿ. ನನ್ನ ತಾಯಿ ಐಟಂ ನಂ.1 ಮತ್ತು 2 ನ್ನು 2 ನೇ ಪ್ರತಿವಾದಿ ಮತ್ತು ಮೃತ ರಾಧಮ್ಮನಿಗೆ ವಿಲ್ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಿಭಾಗದಲ್ಲಿ ಐಟಂ ನಂ.5 ರಿಂದ 9 ಇವುಗಳು 5 ನೇ ಪ್ರತಿವಾದಿ ಮಂಜಮ್ಮನ ಹಿಸ್ಸೆಗೆ ಬಂದಿವೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಪ್ರಕಾರ ಎಂ.ಆರ್.ನಂ.95/1992-93 ರಂತೆ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಐಟಂ ನಂ.2 ರಲ್ಲಿ 39 ಗುಂಟೆ ಮೃತ ರಾಧಮ್ಮನಿಗೆ ವಿಲ್ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಐಟಂ ನಂ.3 ಮತ್ತು 4 ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಾಯಿ ಬರೆದುಕೊಟ್ಟ ದಿನಾಂಕಃ 13.09.1989 ರ ವಿಲ್ ಪ್ರಕಾರ 39 ಗುಂಟೆ ಜಮೀನಿನ ಸ್ವಾಧೀನದಲ್ಲಿ ಮೃತ ರಾಧಮ್ಮ ಇದ್ದರು ಎಂದರೆ ಸರಿಯಲ್ಲ. ರಾಧಮ್ಮನಿಗೆ ಸಂತತಿ ಇರಲಿಲ್ಲ ಎಂದರೆ ಸರಿ. ಮೃತ ರಾಧಮ್ಮ 7 ನೇ ಪ್ರತಿವಾದಿಯ ಮಗ ಶ್ರೀಧರ್ ನನ್ನು ದತ್ತು ಸ್ವೀಕಾರ ಮಾಡಿದ್ದರು ಎಂದರೆ ಸರಿಯಲ್ಲ. ರಾಧಮ್ಮ 1 ರಿಂದ 15 ನೇ ವಯಸ್ಸಿನ ವರೆಗೆ ಶ್ರೀಧರ್‌ನನ್ನು ಬೆಳೆಸಿದ್ದರು ಎಂದರೆ ಸರಿಯಲ್ಲ. ಶ್ರೀಧರ್ ನ ವಿದ್ಯಾಭ್ಯಾಸವನ್ನು ರಾಧಮ್ಮನೇ ಮಾಡಿಸಿದ್ದರು ಎಂದರೆ ಅರದೇಶನಹಳ್ಳಿ ಶಾಲೆಯಲ್ಲಿ ರಾಧಮ್ಮ ಶ್ರೀಧರ್ ನ ವಿದ್ಯಾಭ್ಯಾಸವನ್ನು ರಾಧಮ್ಮನೇ ಮಾಡಿಸಿದ್ದು ನಿಜ. ರಾಧಮ್ಮನಿಗೆ ಸರಿ ಇರಲಿಲ್ಲ ಎಂದರೆ ಸುಳ್ಳು. ರಾಧಮ್ಮನ ಆರೋಗ್ಯದ ಖರ್ಚನ್ನು 7 ನೇ ಪ್ರತಿವಾದಿ ರುಕ್ಮೀಣಿಯವರು ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ರಾಧಮ್ಮ ದಿನಾಂಕಃ 07.01.2008 ರಂದು ಮೃತಪಟ್ಟರು ಎಂದರೆ ಸರಿ. ರಾಧಮ್ಮನ ಮರಣಾನಂತರ ಮೈನರ್ ಶ್ರೀಧರ್ ನ ಹೆಸರಿಗೆ ಖಾತೆ ಬದಲಾವಣೆ ಮಾಡಲು

ಅವಕಾಶವಿಲ್ಲವೆಂದು 7 ನೇ ಪ್ರತಿವಾದಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ ನ್ಯಾಯಾಲಯದ ಸಮಯ ಸಂಜೆ **4.20** ಗಂಟೆಯಾದ ಕಾರಣ**,** ಮುಂದುವರೆದ ಪಾಟೀ ಸವಾಲನ್ನು ಮುಂದೂಡಿತು**)**.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**